# ಕರಣ್ ಕೀಟಲೆ

ಕರಣ್ ಜೋಹರ್ ಸದ್ಯಕ್ಕೆ ಬಾಲಿವುಡ್‌ನ ಅತ್ಯಂತ ಬೇಡಿಕೆಯ ನಿರ್ದೇಶಕ ಅಲ್ಲದಿರಬಹುದು; ಆದರೆ ಸದಾ ಸುದ್ದಿಯಲ್ಲಿರುವಾತ. ನಟ, ನಿರ್ಮಾಪಕ, ನಿರ್ದೇಶಕ, ವಸ್ತ್ರ ವಿನ್ಯಾಸಕ, ಚಿತ್ರಕಥೆಗಾರ, ಟಿವಿ ಸೆಲೆಬ್ರಿಟಿ – ಹೀಗೆ ಬಹುಮುಖ ಪ್ರತಿಭಾವಂತ. ಕಳೆದ ವಾರ ಈತನ 'ಕಾಫಿ ವಿದ್ ಕರಣ್' ಟಿವಿ ಷೋನಲ್ಲಿ ಅತಿಥಿಗಳಾಗಿ ಬಂದ ಕ್ರಿಕೆಟಿಗರಾದ ಹಾರ್ದಿಕ್ ಪಾಂಡ್ಯ ಮತ್ತು ಕೆ.ಎಲ್. ರಾಹುಲ್, ತಮ್ಮ ಮಾತುಗಳಿಗಾಗಿ ಈಗ ಕೈ ಕೈ ಹಿಸುಕಿಕೊಳ್ಳುತ್ತಿದ್ದಾರೆ. ಹೆಣ್ಣುಮಕ್ಕಳ ಜೊತೆಗಿನ ಲಲ್ಲೆ, ಸಲ್ಲಾಪಗಳ ಕುರಿತು ಕರಣ್ ಕೇಳಿದ ಕಾಮೋತ್ತೇಜಕ ಪ್ರಶ್ನೆಗಳಿಗೆ ಪಾಂಡ್ಯ ಮತ್ತು ರಾಹುಲ್ ಉತ್ತರಿಸಿರುವ ರೀತಿ – ಸಾರ್ವಜನಿಕ ಬದುಕಿನ ಬಗ್ಗೆ ಕಾಳಜಿ ಇಟ್ಟುಕೊಂಡವರು ಲಜ್ಜೆಯಿಂದ ಮುಖ ತಗ್ಗಿಸುವಂತಿತ್ತು. ಜನಾಭಿಪ್ರಾಯ ಉಲ್ಟಾ ಆಗುತ್ತಲೇ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಇಬ್ಬರಿಗೂ ನೋಟಿಸ್ ಕೊಟ್ಟು, ಶಿಕ್ಷೆ ಪ್ರಕಟಿಸಿದೆ. ಆದರೆ ಈ ರೀತಿಯ ಪ್ರಶ್ನೆಗಳನ್ನು ಕೇಳಿ, ಹೆಣ್ಣಿನ ಬಗ್ಗೆ ಹಗುರವಾಗಿ ಮಾತನಾಡಲು ಪ್ರಚೋದನೆ ನೀಡಿದ ಕರಣ್ ಬಗ್ಗೆ ಯಾರೂ ಏಕೆ ಮಾತನಾಡುತ್ತಿಲ್ಲ ಎನ್ನುವುದೀಗ ಹೊಸ ಪ್ರಶ್ನೆ. ಕರಣ್‌ಗೆ ನೋಟಿಸ್ ಕೊಡುವವರು ಯಾರು? ಕಳೆದ ವರ್ಷ ಬಾಲಿವುಡ್ ತತ್ತರಿಸಿದ 'ಮಿ ಟೂ' ಚಳವಳಿಗೆ ಸಂಬಂಧಿಸಿ ಇದೇ ಕರಣ್, ಬಹಳ ಸಂಭಾವಿತನಂತೆ ಮಾತನಾಡಿದ್ದ. ತನ್ನ ಚಿತ್ರವೊಂದರಲ್ಲಿ 'ಚಿಕ್‌ನಿ ಚಮೇಲಿ' ಎನ್ನುವ ಅಶ್ಲೀಲ ಎನ್ನಬಹುದಾದ ಹಾಡೊಂದನ್ನು ಸೇರಿಸಿದ್ದರ ಬಗ್ಗೆ ಪಶ್ಚಾತ್ತಾಪ ವ್ಯಕ್ತಪಡಿಸಿದ್ದ. ಆದರೆ ಅದೆಲ್ಲವೂ ನಾಟಕವೇ... ಎನ್ನುವ ಪ್ರಶ್ನೆ ಇದೀಗ ಎದುರಾಗಿದೆ.

ಬಾಲಿವುಡ್‌ನ ಖ್ಯಾತ ನಿರ್ಮಾಪಕ ಯಶ್ ಜೋಹರ್ ಮಗನೀತ. ಕಾಲೇಜಿನಲ್ಲಿ ಕಾಮರ್ಸ್ ಕಲಿತ ಬಳಿಕ, ಫ್ರೆಂಚ್ ಭಾಷೆಯಲ್ಲಿ ಮಾಸ್ಟರ್ಸ್ ಡಿಗ್ರಿ ಪಡೆದ. 1989ರಲ್ಲಿ ದೂರದರ್ಶನದ ಧಾರಾವಾಹಿ 'ಇಂದ್ರಧನುಷ್'ನಲ್ಲಿ ಈತ ಶ್ರೀಕಾಂತ್ ಪಾತ್ರ ವಹಿಸಿದ್ದ ಎನ್ನುವುದು ಈಗ ನೆನಪಿಗೆ ಬಾರದ ಸಂಗತಿ. ಆದರೆ ಸಿನಿಮಾ ನಿರ್ದೇಶಕನಾದ ಬಳಿಕ ಈತ ಬಾಲಿವುಡ್‌ನ 'ಡಾರ್ಲಿಂಗ್' ಆಗಿಬಿಟ್ಟ. 1998ರಲ್ಲಿ ತೆರೆಗೆ ಬಂದ 'ಕುಚ್ ಕುಚ್ ಹೋತಾ ಹೈ' ಎನ್ನುವ ಚೊಚ್ಚಲ ನಿರ್ದೇಶನದ ಸಿನಿಮಾ ಬಾಕ್ಸಾಫೀಸ್ ದಾಖಲೆಗಳನ್ನು ಪುಡಿಗಟ್ಟಿದ್ದೇ ಈತ ಸೂಪರ್‌ಸ್ಟಾರ್ ಆದ. ಅತ್ಯಂತ ಜನಪ್ರಿಯ ಚಿತ್ರ ಎಂಬ ರಾಷ್ಟ್ರೀಯ ಪ್ರಶಸ್ತಿಯೂ ಸಿಕ್ಕಿತು. ಅದಕ್ಕೂ ಮೂರು ವರ್ಷ ಮುನ್ನ ಆದಿತ್ಯ ಚೋಪ್ರಾ ನಿರ್ದೇಶನದ 'ದಿಲ್‌ವಾಲೆ ದುಲ್ಹನಿಯಾ ಲೇ ಜಾಯೆಂಗೆ' ಎನ್ನುವ ಸೂಪರ್‌ಹಿಟ್ ಚಿತ್ರಕ್ಕೆ ಈತ ಸಹನಿರ್ದೇಶಕನಾಗಿದ್ದ. ಮೂರು ವರ್ಷಗಳ ಬಳಿಕ ಆತ ನಿರ್ದೇಶಿಸಿದ 'ಕಭೀ ಖುಷಿ ಕಭೀ ಘಮ್' ಚಿತ್ರ ಕೂಡಾ ಅತ್ಯಂತ ಜನಪ್ರಿಯವಾಯಿತು. ನಂತರ ಬಂದ 'ಕಭಿ ಅಲ್ವಿದ ನಾ ಕಹ್‌ನಾ' ಚಿತ್ರ ದಾಖಲೆ ಗಳಿಕೆ ಸಾಧಿಸಿ ಕರಣ್‌ನ ತಾರಾಪಟ್ಟವನ್ನು ಗಟ್ಟಿಗೊಳಿಸಿತು. ಈ ಮೂರೂ ಸಿನಿಮಾಗಳಲ್ಲಿ ನಟಿಸಿದ ಶಾರೂಕ್ ಖಾನ್, ಕರಣ್‌ನ ಅಚ್ಚುಮೆಚ್ಚಿನ ಗೆಳೆಯನೂ ಆದ. ಬಳಿಕ ಬಂದ 'ಮೈ ನೇಮ್ ಈಸ್ ಖಾನ್' ಮತ್ತು 'ಸ್ಟೂಡೆಂಟ್ ಆಫ್ ದಿ ಇಯರ್' ಕೂಡಾ ಕರಣ್ ತಾಜಾ ಪ್ರತಿಭಾವಂತ ಎನ್ನುವುದನ್ನು ಸಾಬೀತುಪಡಿಸಿತು. ಭಾರತೀಯ ಪ್ರೇಕ್ಷಕರ 'ಸಾಲ್ಟ್ ಆ್ಯಂಡ್ ಸ್ವೀಟ್' ಭಾವನೆಗಳನ್ನು ಹೇಗೆ ನಗದಾಗಿಸಬಹುದು ಎನ್ನುವ ಕಲೆ ಕರಣ್‌ಗೆ ಸಿದ್ಧಿಸಿತ್ತು. ಹಲವು ಚಿತ್ರಗಳನ್ನು ನಿರ್ಮಿಸಿದ ಕರಣ್ ಈಗ ಬಾಲಿವುಡ್‌ನಲ್ಲಿ ದೊಡ್ಡ ಶಕ್ತಿ.



ಕರಣ್‌ಗೀಗ 47ರ ಹರೆಯ. ಇನ್ನೂ ಮದುವೆಯಾಗಿಲ್ಲ. ಮದುವೆಯ ಕುರಿತು ತನ್ನ ಇರಾದೆಯನ್ನು ಈತ ಹಲವು ಸಲ ವ್ಯಕ್ತಪಡಿಸಿದ್ದಿದೆ. ಆತನದ್ದು ಸಲಿಂಗವಾದ. ಎರಡು ವರ್ಷಗಳ ಹಿಂದೆ ಬಾಡಿಗೆ ತಾಯ್ತನದ ಮೂಲಕ ಅವಳಿ ಮಕ್ಕಳ ತಂದೆಯಾಗಿದ್ದಾನೆ. ಗಂಡುಮಗುವಿಗೆ ತನ್ನ ಅಪ್ಪನ ಹೆಸರು ಯಶ್ ಎಂದಿಟ್ಟಿದ್ದರೆ, ಹೆಣ್ಣುಮಗುವಿಗೆ ತಾಯಿಯ ಹೆಸರನ್ನೇ (ಹೀರೂ) ಉಲ್ಟಾ ಮಾಡಿ 'ರೂಹೀ' ಎಂದಿಟ್ಟಿದ್ದಾನೆ.

ಕರಣ್‌ನ ನಿರ್ದೇಶನದ ಹೊಸ ಚಿತ್ರ 'ತಖ್ತ್' ಈ ವರ್ಷ ಶೂಟಿಂಗ್ ಆರಂಭಿಸಲಿದೆ. ಈವರೆಗಿನ ತನ್ನ ನಿರ್ದೇಶನದ ಚಿತ್ರಗಳಿಗೆ ಕರಣ್ ಸ್ವತಃ ಚಿತ್ರಕಥೆ ಬರೆಯುತ್ತಿದ್ದ. ಆದರೆ ತಖ್ತ್ ನಲ್ಲಿ ಬೇರೆಯವರು ಬರೆದಿದ್ದಾರೆ. ಮೊಘಲರ ಕಾಲದ ನಾಟಕೀಯ ಘಟನೆಗಳನ್ನು ಆಧರಿಸಿ ಈ ಚಿತ್ರ ಇದೆಯಂತೆ. ದೊಡ್ಡ ತಾರಾಗಣವಿದೆ.

ಕರಣ್ ಚತುರ ಮಾತುಗಾರ. ಟಿವಿ ಷೋಗಳಲ್ಲಿ ಅದು ಸ್ಪಷ್ಟವಾಗಿ ಎದ್ದುಕಾಣುತ್ತದೆ. ಮಾಧುರಿ ದೀಕ್ಷಿತ್ ಮತ್ತು ರೆಮೋ ಫೆರ್ನಾಂಡಿಸ್ ಜೊತೆಗೆ ಜಡ್ಜ್ ಆಗಿ ನಡೆಸಿಕೊಡುವ ಡ್ಯಾನ್ಸ್ ರಿಯಾಲಿಟಿ ಷೋ, ಮಲೈಕಾ ಆರೋರಾ ಜೊತೆಗೆ 'ಇಂಡಿಯಾ ಹ್ಯಾಸ್ ಗೋಟ್ ಟ್ಯಾಲೆಂಟ್' ಷೋ ಮತ್ತು ರೋಹಿತ್ ಶೆಟ್ಟಿ ಜೊತೆಗೆ 'ಇಂಡಿಯಾಸ್ ನೆಕ್ಸ್ಟ್ ಸೂಪರ್‌ಸ್ಟಾರ್ಸ್' ಕಾರ್ಯಕ್ರಮಗಳು ಸಾಕಷ್ಟು ಜನಪ್ರಿಯ. 'ಕಾಫೀ ವಿದ್ ಕರಣ್' ಈತನ ಸಂದರ್ಶನ ಆಧಾರಿತ ಕಾರ್ಯಕ್ರಮ. ಈ ಷೋನಲ್ಲಿ ಬಂದ ಹಲವರು ಹಲವು ವಿವಾದಗಳನ್ನು ಹುಟ್ಟುಹಾಕಿದ್ದಿದೆ. ಆದರೆ ಈಗ ಮೊದಲ ಬಾರಿಗೆ ಕ್ರಿಕೆಟಿಗರನ್ನು ಕಾಫೀಗೆ ಕರೆದ ಕರಣ್, ಹುಟ್ಟುಹಾಕಿರುವ ವಿವಾದ ಸಜ್ಜನಿಕೆಯ ಎಲ್ಲೆಗಳನ್ನು ಮೀರಿದಂತಿದೆ. 2004ರಿಂದ ನಡುನಡುವೆ ಸ್ವಲ್ಪ ಅವಧಿ ಬಿಟ್ಟು ಪ್ರಸಾರವಾಗುತ್ತಿರುವ ಈ ಕಾರ್ಯಕ್ರಮ ಸಾಕಷ್ಟು ಜನಪ್ರಿಯವೂ ಹೌದು. ಜನಪ್ರಿಯತೆಯ ಅಲೆಯಲ್ಲಿ ತನ್ನ ವಿರುದ್ಧದ ವಿವಾದಗಳನ್ನೂ ಮುಳುಗಿಸಿಬಿಡುವ ಚಾತುರ್ಯ ಕರಣ್‌ಗಿದೆ ಎನ್ನುವುದೂ ಸುಳ್ಳಲ್ಲ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65